**3** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಗಳೂರು**,** ದ**.**ಕ**.**

ಎಸ್**.**ಸಿ**. 126 / 2024**

ಪೋಲಿಸ್ ನಿರೀಕ್ಷಕರು,
ಬೆಳ್ತಂಗಡಿ ಪೋಲಿಸ್ ಠಾಣೆ, - ಪಿರ್ಯಾದಿ

- ವಿರುದ್ಧ -

ಸತೀಶ್ ಯಾನೆ ಸ್ಕಾರ್ಪಿಯೋ ಸತೀಶ್ - ಆರೋಪಿತ

ಭಾ**.**ದಂ**.**ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಬರೆದುಕೊಂಡ ಆರೋಪಿಯ ಹೇಳಿಕೆ

| | | |
|---|---|---|
| ಆರೋಪಿಯ ಹೆಸರು | : | ಸತೀಶ್ ಯಾನೆ ಸ್ಕಾರ್ಪಿಯೋ ಸತೀಶ್ |
| ತಂದೆಯ ಹೆಸರು | : | ಲೇಟ್ ಶಾಜಿ |
| ವಯಸ್ಸು | : | 36 ವರ್ಷ |
| ವಾಸ | : | ದೇವಿಗುಡಿ ಮನೆ, ಸೋಮನ್ತಡ್ಕ ಗ್ರಾಮ,<br>ಬೆಳ್ತಂಗಡಿ ತಾಲೂಕು,<br>ದ.ಕ, ಕರ್ನಾಟಕ. |

--

ಪ್ರಶ್ನೆ-1 ಪಿರ್ಯಾದಿದಾರರು ನ್ಯಾಯಾಲಯದ ಮುಂದೆ ಮಾಡಿದ ಸಾಕ್ಷ್ಯ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ-2 ಪ್ರಾಸಾ-6 ಓಬಯ್ಯ ಅಲಿಯಾಸ್ ಕೂಸಪ್ಪ ಪೂಜಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-1 ಗಾಯತ್ರಿ ರವರು, ಚಾಸಾ-11 ಸಂಜೀವರವರಿಗೆ ಸೇರಿದ ಮೈಂದಕೋಡಿಯಲ್ಲಿರುವ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ನಿಪಿ-2 ರ ಮಹಜರಿಗೆ ಸಹಿಯನ್ನು ಸುಮಾರು ಒಂದು ವರ್ಷದ ಹಿಂದೆ ಚಾಸಾ-1 ರವರು ವಾಸವಾಗಿದ್ದ ಬಾಡಿಗೆ ಮನೆಯಲ್ಲಿ ಹಾಕಿದ್ದು, ಸದರಿ ಮನೆಗೆ ಪೋಲಿಸರು ಚಾಸಾ-1 ಮತ್ತು ಅವಳ ಜೊತೆ ವಾಸವಾಗಿದ್ದ ಗಂಡಸಿನ ಜಗಳದ ಸಂಬಂಧ ತಯಾರಿಸಿದ ಮಹಜರಿಗೆ ಸಹಿ ಮಾಡಿದ್ದು, ಆ ಸಮಯದಲ್ಲಿ ಚಾಸಾ-1 ಗಾಯತ್ರಿ ಮತ್ತು ಚಾಸಾ-8 ನಾರಾಯಣ ಗೌಡ ರವರು ಸ್ಥಳದಲ್ಲಿದ್ದು, ಮಹಜರನ್ನು ಮಧ್ಯಾಹ್ನದ ನಂತರ ಮಾಡಿದ್ದು, ಮನೆಯೊಳಗಿದ್ದ ಹಗ್ಗ , ಹೆಂಗಸು ಉಪಯೋಗಿಸುವ ಒಳಉಡುಪು, ಚೂಡಿದಾರದ ತುಂಡುಗಳು, ಶಾಲಿನ ತುಂಡು ಮತ್ತು ಖಾಲಿ ಬಿಯರ್ ಬಾಟಲಿ ಗಳನ್ನು ಪೋಲಿಸರು

ಪ್ರತ್ಯೇಕವಾಗಿ ಪ್ಯಾಕ್ ಮಾಡಿ ವಶಪಡಿಸಿಕೊಂಡಿದ್ದು, ಮಹಜರುಕಾಲಕ್ಕೆ ಪೋಲಿಸರು ನಿಪಿ-3 ರಂತೆ ಪೋಟೊ ತೆಗೆದಿದ್ದು, ಸದರಿ ಪೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-3 ಫಿರ್ಯಾಸಾ-6 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದೆ ಇದ್ದ **ಎಂ.ಒ-1 ರಿಂದ ಎಂ.ಒ-7 ರ** ಪಿಂಕ್ ಬಣ್ಣದ ಒಳಉಡುಪಿನ ಎರಡು ತುಂಡುಗಳು ಮತ್ತು ಬೂದು ಬಣ್ಣದ ಚೂಡಿದಾರದ ಟಾಪ್ ನ ಮೂರು ತುಂಡುಗಳು ಮತ್ತು ಕಪ್ಪು ಬಣ್ಣದ ಚೂಡಿದಾರದ ಬಾಟಮ್ ನ ಎರಡು ತುಂಡುಗಳು , ಕಪ್ಪು ಬಣ್ಣದ ಹರಿದ ಬಾಕ್ಸ್ ತರಹದ ಒಳಚಡ್ಡಿ ಒಂದು, ಹಸಿರು ಮತ್ತು ಕೆಂಪು ಬಣ್ಣದ ಬಾರ್ಡರ್ ಇರುವ ಕೇಸರಿ ಬಣ್ಣದ ಲುಂಗಿ ಒಂದು, ಕಪ್ಪು ಬಣ್ಣದ ಚೂಡಿದಾರದ ವೇಲ್ ಒಂದು, ನೋವಿಗೆ ಹಾಕುವ ಬ್ಯಾಂಡೇಜ್ ನ ಒಂದು ತುಂಡು ಮತ್ತು ಎಂ.ಒ-8 ರ 330 ಎಂ.ಎಲ್ ನ ಬಿಯರ್ ಬಾಟಲಿಯ ಚೂರುಗಳನ್ನು ನೋಡಿ ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-4 ಫಿರ್ಯಾಸಾ-7 ಬೆಸೆಲ್ ಎಲ್ಡೋಸ್ ಇವರು ತಮ್ಮ ಸಾಕ್ಷ್ಯದಲ್ಲಿ, ತನಗೆ ಬೆಳ್ತಂಗಡಿ ತಾಲೂಕು ಕೊಯ್ಯೂರು ಗ್ರಾಮದ ಮೈಂದಕೋಡಿ ಎಂಬಲ್ಲಿ ರಬ್ಬರ್ ತೋಟವಿದ್ದು, ಆರೋಪಿ ಸತೀಶ್ ಯಾನೆ ಸ್ಕಾರ್ಪಿಯೋ ಸತೀಶ್ ಪರಿಚಯ ಇದ್ದು, ಆತ ಸುಮಾರು ಒಂದು ವರ್ಷಗಳ ಹಿಂದೆ ಒಂದು ತಿಂಗಳ ಕಾಲ ತಮ್ಮ ರಬ್ಬರ್ ತೋಟದಲ್ಲಿ ರಬ್ಬರ್ ಟ್ಯಾಪಿಂಗ್ ಕೆಲಸ ಮಾಡುತ್ತಿದ್ದು, ಚಾಸಾ-1 ಗಾಯತ್ರಿ ರವರನ್ನು ಆತನ ಹೆಂಡತಿ ಎಂದು ಹೇಳುತ್ತಿದ್ದು, ಅವರು ತನ್ನ ರಬ್ಬರ್ ತೋಟದ ಪಕ್ಕದಲ್ಲಿರುವ ಒಂದು ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-5 ಫಿರ್ಯಾಸಾ-8 ಮಹಮ್ಮದ್ ಅಶ್ರಫ್ ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿಮ್ಮನ್ನು ಈ ಹಿಂದೆ ನೀವು ಬಾಡಿಗೆಗಿದ್ದ ಮನೆಯಲ್ಲಿ ನೋಡಿದ್ದೆ. ನಿಪಿ-11 ಸ್ವತ್ತು ಮಹಜರಿಗೆ ನಿಪಿ-11(ಎ) ರಂತೆ ಸಹಿ ಹಾಕಿದ್ದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ.6 ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಿಪಿ-12(2) ಪೊಟೋವನ್ನು ಆರೋಪಿ ವಾಸವಾಗಿದ್ದ ಬಾಡಿಗೆ ಮನೆಯಲ್ಲಿ ತೆಗೆದಿದ್ದು ಆ ಪೊಟೋದಲ್ಲಿ ತನ್ನನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ.7 ಫ್ರಾಸಾ-9/ಮಹಮ್ಮದ್ ಸಮೀರ್ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿಮ್ಮನ್ನು ಈ ಹಿಂದೆ ನೀವು ಬಾಡಿಗೆಗೆ ಇದ್ದ ಮನೆಯಲ್ಲಿ ನೋಡಿದ್ದು, ನಿಪಿ-11 ಸ್ವತ್ತು ಸ್ವಾದೀನತಾ ಮಹಜರಿಗೆ ನಿಪಿ-11(ಬಿ) ರಂತೆ ಸಹಿ ಮಾಡಿದ್ದೇನೆ ಮತ್ತು ನಿಪಿ-12(2) ಪೊಟೋದಲ್ಲಿ ತನ್ನನ್ನು ಗುರುತಿಸಿ ಸಾಕ್ಷ ನುಡಿದಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ.8 ಫ್ರಾಸಾ-10 ಡಾಃತಾರಕೇಶ್ವರಿ ವಿ ಶೆಟ್ಟಿ ENT Specialist at Taluk General Hospital, Belthangady ಇವರು ತಮ್ಮ ಸಾಕ್ಷ್ಯದಲ್ಲಿ, On 29.06.2024 at 9.00pm, one Gayathri, aged 28 years, W/o Shantappa, C/o Sanjeeva Nekara, Myndakodi, Koyyur, Belthangady was brought in 108 Ambulance Belthangady with the history of assault on 28.06.2024 at around 4.00 pm to 7 pm by her lover one Sathish by beer bottle, sickle and hands and she had black mole on the left side of the neck ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-9 ಫ್ರಾಸಾ-10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, On examination, she had swelling over the left infra orbital area, Minor abrasions over the right thigh, Tenderness over the chest and neck ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-10 ಫ್ರಾಸಾ-10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, on examination, she was of the opinion that injuries no.1 to 3 are simple in nature and in that regard she has issued Ex.P15 wound certificate dated

13.07.2024 which bears her signature and official seal ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-11 ಫ್ರಾಸಾ-10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, On 22.07.2024, she has received Beer Bottle, sickle with plastic handle from Belthangady P.S in Cr.No.72/2024 and examined them and the weight, dimensions and the other features and the descriptions has been mentioned in detail in her report and she identifies the weapon before Court and has given her opinion as per Ex.P16 and that happening of injury no.1 to 3 cannot be ruled out by the use of above said items ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-12 ಫ್ರಾಸಾ-11 ಪ್ರಕಾಶ್ ಎಸ್ ಕೊಯ್ಯೂರು ಗ್ರಾಮ ಪಂಚಾಯತಿಯ ಪಿ.ಡಿ.ಒ ಇವರು ತಮ್ಮ ಸಾಕ್ಷ್ಯದಲ್ಲಿ, ಪ್ರಕರಣದ ತನಿಖಾಧಿಕಾರಿಯವರು ಕೋರಿದಂತೆ, ಬೆಳ್ತಂಗಡಿ ಪೊಲೀಸ್ ಠಾಣೆಯ ಅಪರಾಧ ಕ್ರಮಾಂಕ 72/2024 ರಲ್ಲಿ ಘಟನೆಯಾದ ಮನೆ ನಂಬ್ರ 4/3(2) ರ ಮಾಲಿಕತ್ವದ ಬಗ್ಗೆ ವಿವರವನ್ನು ಕೇಳಿದ್ದು, ಅದರಂತೆ ತಾನು ತಮ್ಮ ಪಂಚಾಯಿತಿಯಲ್ಲಿರುವ ಮನೆ ತೆರಿಗೆ ರಿಜಿಸ್ಟರ್ ಪರಿಶೀಲಿಸಿ ಸದರಿ ಮನೆಯು ಶ್ರೀಮತಿ ಶುಭಲತಾ ಕೋಂ ಸಂಜೀವ ನೇಕಾರ ಮೈಂದಕೋಡಿ, ಇವರ ಹೆಸರಿನಲ್ಲಿ ಇರುವುದಾಗಿ ದಿನಾಂಕ 25.07.2024 ರಂದು ನಿಪಿ-17 ರಂತೆ ದೃಡೀಕರಣ ಪತ್ರವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-13 ಫ್ರಾಸಾ-12 ಗಂಗಾಧರ ಪೂಜಾರಿ ಮುಖ್ಯ ಪೇದೆ, ಬೆಳ್ತಂಗಡಿ ಠಾಣೆ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 29.06.2024 ರಂದು ಠಾಣಾಧಿಕಾರಿಯವರ ಮೌಖಿಕ ಆದೇಶದಲ್ಲಿ ಮಂಗಳೂರು ವೆನ್ಲಾಕ್ ಆಸ್ಪತ್ರೆಯಲ್ಲಿ ಗಾಯಗೊಂಡು ಚಿಕಿತ್ಸೆಗೆ ದಾಖಲಾಗಿದ್ದ ಚಾಸಾ-1 ಗಾಯತ್ರಿರವರನ್ನು ಮದ್ಯಾಹ್ನ 12.15 ಗಂಟೆಯಿಂದ 1.15 ಗಂಟೆಯವರೆಗೆ ವಿಚಾರಿಸಿ ಅವರ ಹೇಳಿಕೆಯನ್ನು ನಿಪಿ-1 ರಂತೆ ದಾಖಲಿಸಿಕೊಂಡು ನಂತರ ಅವರಿಗೆ ಓದಿ ಹೇಳಿ, ಸದರಿ ಹೇಳಿಕೆಯಲ್ಲಿ ಅವರ ಸಹಿ ಪಡೆದು , ನಂತರ ಠಾಣೆಗೆ ಬಂದು ಠಾಣಾ ಪ್ರಭಾರದಲ್ಲಿದ್ದ ಚಾಸಾ-16 ಜಗದೀಶ್ ರವರಿಗೆ

ಸಂಜೆ 3.15 ಗಂಟೆಗೆ ಹೇಳಿಕೆಯನ್ನು ಹಸ್ತಾಂತರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-14 ಫ್ರಾಸಾ-13 ಶಿವಕುಮಾರ್ ಸಿಂಗಾರೆ, ಪೇದೆ, ಬೆಳ್ತಂಗಡಿ ಠಾಣೆ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 29.06.2024 ರಂದು ಬೆಳ್ತಂಗಡಿ ಪೊಲೀಸು ಠಾಣೆಯಲ್ಲಿ ದಾಖಲಾದ ಸದರಿ ಪ್ರಕರಣದ ನಿಪಿ-18 ರ ಪ್ರ.ವ.ವರದಿಯನ್ನು ದಿನಾಂಕ 30.06.2024 ರಂದು ಮದ್ಯಾಹ್ನ 12.05 ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-15 ಫ್ರಾಸಾ-14 ಜಗದೀಶ್ ಎ. ಮುಖ್ಯ ಪೇದೆ, ಬೆಳ್ತಂಗಡಿ ಠಾಣೆ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 29.06.2024 ರಂದು ತಾನು ಬೆಳ್ತಂಗಡಿ ಪೊಲೀಸು ಠಾಣೆಯಲ್ಲಿ ಹಗಲು ಠಾಣಾ ಪ್ರಭಾರ ಕರ್ತವ್ಯದಲ್ಲಿರುವಾಗ, ಚಾಸಾ-15 ಗಂಗಾಧರರವರು ವೆನ್ಲಾಕ್ ಆಸ್ಪತ್ರೆಗೆ ತೆರಳಿ ಅಲ್ಲಿ ದಾಖಲಾಗಿದ್ದ ಚಾಸಾ-1 ಗಾಯತ್ರಿರವರ ನಿಪಿ-1 ರ ಹೇಳಿಕೆಯನ್ನು ದಾಖಲಿಸಿ , ಠಾಣೆಗೆ ಬಂದು ಮದ್ಯಾಹ್ನ 3.15 ಕ್ಕೆ ತನಗೆ ನೀಡಿದ್ದನ್ನು ಸ್ವೀಕರಿಸಿ ಅದನ್ನು ಪರಿಶೀಲಿಸಿ ಠಾಣಾ ಅಪರಾದ ಕ್ರಮಾಂಕ 72/2024 ರಲ್ಲಿ ಪ್ರಕರಣ ದಾಖಲಿಸಿ, ನಿಪಿ-18 ರ ಮೂಲ ಪ್ರ.ವ.ವರದಿಯನ್ನು ಚಾಸಾ-17 ಶಿವಕುಮಾರ್ ರವರ ಮೂಲಕ ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಗಳನ್ನು ಮೇಲಾಧಿಕಾರಿಯವರಿಗೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-16 ಫ್ರಾಸಾ-15 ಮುರಳೀಧರ್ ನಾಯ್ಕ ಕೆ.ಜಿ ಪಿ.ಎಸ್ ಐ, ಬೆಳ್ತಂಗಡಿ ಠಾಣೆ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 30.06.2024 ರಂದು ಆರೋಪಿ ಸತೀಶ್ ಯಾನೆ ಸ್ಕಾರ್ಪಿಯೋ ಸತೀಶ್ ನ ಪತ್ತೆಗಾಗಿ ಸಿಬ್ಬಂದಿಗಳಾದ ಬೆನ್ನಿಚ್ಚನ್ ಮತ್ತು ಚರಣ್ ರವರಿಗೆ ಜ್ಞಾಪನ ನೀಡಿದ್ದು, ಅದೇ ದಿನ ತಕ್ಷೀರು ಸ್ಥಳದ ಮಹಜರು ತಯಾರಿಸಲು ಬೆಳ್ತಂಗಡಿ ತಾಲುಕು ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಚಾಸಾ-1 ಗಾಯತ್ರಿರವರನ್ನು ತಕ್ಷೀರು ಜಾಗವನ್ನು ತೋರಿಸಿ ಮಹಜರು ಮಾಡಲು ಸಹಕರಿಸುವಂತೆ ಕಳುಹಿಸಿಕೊಡಲು, ವೈದ್ಯರಿಗೆ ವಿನಂತಿ ಪತ್ರವನ್ನು ನೀಡಿದ್ದು ವೈದ್ಯರು ಅನುಮತಿಸಿದಂತೆ, ಚಾಸಾ-1 ರವರನ್ನು ಆಸ್ಪತ್ರೆಯಿಂದ ಕರೆದುಕೊಂಡು ಮದ್ಯಾಹ್ನ 2 ಗಂಟೆಗೆ ಕೊಯ್ಯೂರು ಗ್ರಾಮದ ಮೈಂದಕೋಡಿ ಎಂಬಲ್ಲಿ ತಲುಪಿದಾಗ, ಚಾಸಾ-1 ರವರು ಘಟನಾ ಸ್ಥಳ ತೋರಿಸಿಕೊಟ್ಟಿದ್ದು, ಅವರು ವಾಸವಾಗಿದ್ದ

ಮನೆಯ ಬಳಿ ವಾಹನವನ್ನು ನಿಲ್ಲಿಸಿ ತಾವೆಲ್ಲರೂ ಇಳಿದು, ಅಲ್ಲಿ ಹಾಜರಿದ್ದ ಚಾಸಾ-7 ಓಬಯ್ಯ ಪೂಜಾರಿ ಮತ್ತು ಚಾಸಾ-8 ನಾರಾಯಣ ಗೌಡರವರನ್ನು ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದು, ಸದರಿ ಜಾಗದಲ್ಲಿ ಮದ್ಯಾಹ್ನ 2.00 ರಿಂದ 2.45 ರ ಸಮಯದಲ್ಲಿ ನಿಪಿ-2 ರಂತೆ ಮಹಜರನ್ನು ತಯಾರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-17 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನಿಪಿ-2 ರ ಮಹಜರು ಕಾಲಕ್ಕೆ ಚಾಸಾ-1 ಗಾಯತ್ರಿರವರು ತೋರಿಸಿಕೊಟ್ಟಂತೆ ಪಿಂಕ್ ಬಣ್ಣದ ಒಳಬಾಡಿಯ ಎರಡು ತುಂಡುಗಳು, ಬೂದು ಬಣ್ಣದ ಚೂಡಿದಾರದ ಟಾಪಿನ ಮೂರು ತುಂಡುಗಳು, ಕಪ್ಪು ಬಣ್ಣದ ಚೂಡಿದಾರದ ಬಾಟಂ ನ ಎರಡು ತುಂಡುಗಳು, ಕಪ್ಪು ಬಣ್ಣದ ಹರಿದ ಬಾಕ್ಸ್ ತರಹದ ಒಳಚಡ್ಡಿ ಒಂದು, ಹಸಿರು ಮತ್ತು ಕೆಂಪು ಬಣ್ಣದ ಬಾರ್ಡರ್ ಇರುವ ಕೇಸರಿ ಬಣ್ಣದ ಲುಂಗಿ ಒಂದು, ಕಪ್ಪು ಬಣ್ಣದ ಚೂಡಿದಾರದ ವೇಲ್ ಒಂದು, ಬ್ಯಾಂಡೇಜ್ ಒಂದು ತುಂಡು ಮತ್ತು 330 ಎಂ.ಎಲ್ ಬುಲೆಟ್ ಸೂಪರ್ ಸ್ಟ್ರಾಂಗ್ ಬಿಯರ್ ಎಂದು ಬರೆದ ಖಾಲಿ ಬಾಟಲಿಯನ್ನು ವಶಪಡಿಸಿಕೊಂಡು, ಪ್ರತ್ಯೇಕವಾಗಿ ಹಸಿರು ಬಣ್ಣದ ಎನ್ ವೆಲಪ್ ಕವರಿಗೆ ಹಾಕಿ ಅರಗು ಸೀಲು ಹಾಕಿ ಪಂಚರ ಮತ್ತು ತನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-18 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಮಹಜರು ಕಾಲಕ್ಕೆ ನಿಪಿ-3 ರಂತೆ ಪೋಟೊವನ್ನು ತೆಗೆಸಿದ್ದು, ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು ಮತ್ತು ಆ ಸಮಯದಲ್ಲಿ ನಿಪಿ-19 ರಂತೆ ತಕ್ಷೀರು ಸ್ಥಳದ ಕರಡು ನಕಾಶೆಯನ್ನು ಸಹ ತಯಾರಿಸಿದ್ದು, ಮಹಜರು ಕಾಲಕ್ಕೆ ವಶಪಡಿಸಿಕೊಂಡ ಸ್ವತ್ತುಗಳನ್ನು ಎಂ.ಒ-1 ರಿಂದ 8 ರಲ್ಲಿ ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-19 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಅದೇ ದಿನ ಮದ್ಯಾಹ್ನ 3.15 ಗಂಟೆಗೆ ಆರೋಪಿ ಪತ್ತೆಗೆ ನೇಮಿಸಿದ್ದ ಸಿಬ್ಬಂದಿಗಳು ಆರೋಪಿಯನ್ನು ವಶಕ್ಕೆ ಪಡೆದು ತನ್ನ ಮುಂದೆ ಹಾಜರುಪಡಿಸಿದ್ದು, ಆತನನ್ನು ಕೂಲಂಕುಷವಾಗಿ ವಿಚಾರಿಸಿ, ದಸ್ತಗಿರಿಮಾಡಿ ದಸ್ತಗಿರಿ

ನಿಯಮವನ್ನು ಪಾಲಿಸಿ, ಆತನ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-20 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ, ತನ್ನೊಂದಿಗೆ ಬಂದರೆ ಗಾಯತ್ರಿಗೆ ಹಲ್ಲೆಗೆ ಉಪಯೋಗಿಸಿದ ಕತ್ತಿಯನ್ನು ತೋರಿಸಿಕೊಡುತ್ತೇನೆಂದು ಹೇಳಿದ ಮೇರೆಗೆ, ಪಂಚರಾದ ಚಾಸಾ-9 ಮಹಮ್ಮದ್ ಅಶ್ರಫ್ ಮತ್ತು ಚಾಸಾ-10 ಮಹಮ್ಮದ್ ಸಮೀರ್ ರವರನ್ನು ಠಾಣೆಗೆ ಬರಮಾಡಿಸಿ ಅವರಿಗೆ ಪ್ರಕರಣದ ಮಾಹಿತಿಯನ್ನು ನೀಡಿ, ಪಂಚರು, ಸಿಬ್ಬಂದಿಗಳು, ತಾನು ಮತ್ತು ಆರೋಪಿ ಸಂಜೆ 4.30 ಗಂಟೆಗೆ ಇಲಾಖಾ ಜೀಪಿನಲ್ಲಿ ಹೊರಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-21 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆರೋಪಿ ದಾರಿ ತೋರಿಸಿದಂತೆ ಮೂರು ಮಾರ್ಗ ಜಂಕ್ಷನ್ ತಲುಪಿದಾಗ, ಬಲಕಡೆಗೆ ಉಜಿರೆ ಕಡೆಗೆ ಹೋಗುವ ರಸ್ತೆಯನ್ನು ತೋರಿಸಿ , ಅಲ್ಲಿಂದ ಲ್ಯಾಲಾ ದಿಂದ ಸ್ವಲ್ಪ ಮುಂದಕ್ಕೆ ಹೋದಾಗ ಬಲಕಡೆಗೆ ಕೊಯ್ಯೂರು ಕ್ರಾಸ್ ರಸ್ತೆಯ ಕಡೆಗೆ ಹೋಗುವಂತೆ ತಿಳಿಸಿದ್ದು, ಅಲ್ಲಿಂದ ಮುಂದೆ ಹೋಗುತ್ತಿರುವಾಗ ಸಂಜೆ 5.00 ಗಂಟೆಗೆ ಮೈಂದಕೋಡಿ ಎಂಬಲ್ಲಿಗೆ ತಲುಪಿದಾಗ, ಆರೋಪಿಯು ಜೀಪನ್ನು ನಿಲ್ಲಿಸುವಂತೆ ಸೂಚಿಸಿದ್ದು ಅದರಂತೆ ಜೀಪನ್ನು ನಿಲ್ಲಿಸಿದ್ದು ಜೀಪಿನಿಂದ ಆರೋಪಿಯು ಇಳಿದು ನಡೆದುಕೊಂಡು ಹೋದಾಗ ತಾವೆಲ್ಲರೂ ಆತನನ್ನು ಹಿಂಬಾಲಿಸಿದ್ದ ಸುಮಾರು 50 ಅಡಿ ದೂರದಲ್ಲಿ ಶೀಟ್ ಹಾಕಿದ್ದ ಮನೆಗೆ ಕರೆದುಕೊಂಡು ಹೋಗಿ, ಇದೇ ಮನೆಯಲ್ಲಿ ಚಾಸಾ-1 ಗಾಯತ್ರಿರವರೊಂದಿಗೆ ವಾಸವಾಗಿದ್ದು ಎಂದು ಹೇಳಿ ಸದರಿ ಮನೆಯ ಬೆಡ್ ರೂಂನ್ನು ತೋರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-22 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನಂತರ ಆರೋಪಿ ಸದರಿ ಮನೆಯಲ್ಲಿ ದಿನಾಂಕ 28.06.2024 ರಂದು ಸಂಜೆ ಗಲಾಟೆಯಾಗಿರುವುದಾಗಿ ತಿಳಿಸಿ, ಅಡುಗೆ ಕೋಣೆಗೆ ಹೋಗಿ ಅಲ್ಲಿ ನೆಲದಿಂದ ಸ್ವಲ್ಪ ಎತ್ತರದಲ್ಲಿ ಮರದ ಹಲಗೆಯ ಮೇಲೆ ಇಟ್ಟಿದ್ದ ಪ್ಲಾಸ್ಟಿಕ್ ಟಬ್ ನ ಒಳಗೆ ಬಚ್ಚಿಟ್ಟ ಕತ್ತಿಯನ್ನು ತೋರಿಸಿ ಅದನ್ನು ತಮ್ಮ ಮುಂದೆ ಹಾಜರುಪಡಿಸಿ ಇದೇ ಕತ್ತಿಯನ್ನು ಹಲ್ಲೆಗೆ ಉಪಯೋಗಿಸಿರುವುದಾಗಿ ನುಡಿದಿದ್ದು, ಸದರಿ ಜಾಗದಲ್ಲಿ ಸಂಜೆ 5.00

ರಿಂದ 5.30 ಗಂಟೆಯ ಸಮಯದಲ್ಲಿ ನಿಪಿ-11 ರಂತೆ ಸ್ವತ್ತು ಸ್ವಾಧೀನ ಮಹಜರನ್ನು ತಯಾರಿಸಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-23 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಮಹಜರು ಕಾಲಕ್ಕೆ ನಿಪಿ-12(2) ರಂತೆ ಫೋಟೊಗಳನ್ನು ತೆಗೆದಿದ್ದು, ನಂತರ ಆರೋಪಿ ಮತ್ತು ಸ್ವತ್ತಿನೊಂದಿಗೆ ಠಾಣೆಗೆ ಬಂದಿದ್ದು, ಆರೋಪಿಯ ವೈದ್ಯಕೀಯ ಪರೀಕ್ಷೆಯಾದ ಬಳಿಕ ರಿಮಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಮತ್ತು ಅದೇ ದಿನ ಚಾಸಾ-2 ರಿಂದ 11 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ವಶಪಡಿಸಿಕೊಂಡ ಕತ್ತಿಯನ್ನು ಎಂ.ಓ-9 ರಲ್ಲಿ ನೋಡಿ ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-24 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 01.07.2024 ರಂದು ಡಬ್ಲ್ಯೂ ಹೆಚ್.ಸಿ 775 ಸುಕನ್ಯಾ ರವರೊಂದಿಗೆ 164 ಸ್ಟೇಟ್ ಮೆಂಟ್ ದಾಖಲಿಸಲು ಚಾಸಾ-1 ಗಾಯತ್ರಿ ರವರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಮಾನ್ಯ ನ್ಯಾಯಾಧೀಶರು ಚಾಸಾ-1 ರವರ ಹೇಳಿಕೆಯನ್ನು ದಾಖಲಿಸಿರುವುದಾಗಿ ತನ್ನ ಮುಂದೆ ವರದಿ ಮಾಡಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-25 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 02.07.2024 ರಂದು, ಚಾಸಾ-18 ಶಿವರಾಜ್ ಜಿರಾಲಿ ರವರು ತಕ್ಷೀರು ಸ್ಥಳದ ಮಹಜರು ಮತ್ತು ಸ್ವತ್ತು ಸ್ವಾಧೀನ ಮಹಜರು ಸಮಯ ತೆಗೆದ ಫೋಟೋ ಮತ್ತು ನಿಪಿ-21 ರ ಸಿಡಿಯನ್ನು ತಯಾರಿಸಿದ ಬಗ್ಗೆ ನಿಪಿ-20 ರಂತೆ 65 ಬಿ ದೃಢೀಕರಣ ಪತ್ರದೊಂದಿಗೆ ತನಗೆ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-26 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಅದೇ ದಿನ ಚಾಸಾ-1 ಗಾಯತ್ರಿ ರವರ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ವೆನ್ಲಾಕ್ ಆಸ್ಪತ್ರೆ ಮಂಗಳೂರು ಮತ್ತು ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಕೋರಿಕೆ ಪತ್ರಗಳನ್ನು ನೀಡಿದ್ದು ಮತ್ತು ಅದೇ ದಿನ ಘಟನೆ ನಡೆದ ಸಮಯ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಶಾಖಾಧಿಕಾರಿಗಳು, ಮೆಸ್ಕಾಂ ಬೆಳ್ತಂಗಡಿ ಇವರಿಗೆ ಕೋರಿಕೆ ಪತ್ರ ಮತ್ತು ಘಟನಾ ಸ್ಥಳದ ಮಾಲಿಕತ್ವದ ಬಗ್ಗೆ ದೃಡಪತ್ರ

ನೀಡುವಂತೆ ಪಿಡಿಒ ಕೊಯ್ಯೂರು ಗ್ರಾಮ ಪಂಚಾಯಿತಿ ಇವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-27 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 13.7.2024 ರಂದು ಚಾಸಾ-1 ಗಾಯತ್ರಿರವರು ನ್ಯಾಯಾಧೀಶರ ಮುಂದೆ ನೀಡಿದ ನಿಪಿ-4 ರ ಹೇಳಿಕೆಯನ್ನು ಸ್ವೀಕರಿಸಿದ್ದು ಮತ್ತು ದಿನಾಂಕ 17.07.2024 ರಂದು ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿದ್ದು, ಅದೇ ದಿನ ಚಾಸಾ-1 ರವರ ನಿಪಿ-15 ರ ಗಾಯದ ಪ್ರಮಾಣ ಪತ್ರವನ್ನು ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-28 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 24.07.2024 ರಂದು ಗಾಯಾಳುವಿಗೆ ಆದಂತಹ ಗಾಯಗಳು ವಶಪಡಿಸಿಕೊಂಡ ಆಯುಧಗಳಿಂದ ಆಗಬಹುದೇ ಎನ್ನುವ ಬಗ್ಗೆ ಅಭಿಪ್ರಾಯ ವರದಿಯನ್ನು ನೀಡುವಂತೆ ಕೋರಿ ಪತ್ರವನ್ನು ಬರೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-29 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 30.07.2024 ರಂದು ಪಿ.ಡಿ.ಒ ಕೊಯ್ಯೂರು ಗ್ರಾಮ ಪಂಚಾಯಿತಿ ಇವರಿಂದ ಘಟನಾ ಸ್ಥಳದ ಮಾಲಿಕತ್ವದ ಬಗ್ಗೆ ನಿಪಿ-17 ರಂತೆ ದೃಡೀಕರಣ ಪತ್ರವನ್ನು ಪಡೆದಿದ್ದು, ದಿನಾಂಕ 07.08.2024 ರಂದು ಸಹಾಯಕ ಇಂಜಿನಿಯರ್ ಮೆಸ್ಕಾಂ ಬೆಳ್ತಂಗಡಿ ಇವರಿಂದ ಘಟನೆಯಾದ ದಿನ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ನಿಪಿ-22 ರಂತೆ ದೃಢಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿದ್ದು, ದಿನಾಂಕ 20.08.2024 ರಂದು ಆರೋಪಿಯ ವಿರುದ್ದ ಸಾಕಷ್ಟು ಸಾಕ್ಷ್ಯದಾರ ಇದ್ದ ಕಾರಣ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-30 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 25.09.2024 ರಂದು ವೆನ್ಲಾಕ್ ಆಸ್ಪತ್ರೆಯಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರ ಮತ್ತು ಚಾಸಾ-19 ರವರಿಗೆ

ಆರೋಪಿ ಪತ್ತೆ ಬಗ್ಗೆ ನೀಡಿದ ಜ್ಞಾಪನ ಮತ್ತು ಚಾಸಾ-20 ರವರು ಆರೋಪಿಯನ್ನು ವಶಕ್ಕೆ ಪಡೆದು ತನ್ನ ಮುಂದೆ ಹಾಜರುಪಡಿಸುವ ಸಮಯ ನೀಡಿದ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪಣ ಪಟ್ಟಿಯೊಂದಿಗೆ ಸಲ್ಲಿಸಿದ್ದು, ಅವುಗಳನ್ನು ನಿಪಿ-23 ರಿಂದ 25 ರ ದಾಖಲೆಗಳಲ್ಲಿ ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-31 ಫ್ರಾಸಾ-15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ತನ್ನಮುಂದೆ ಚಾಸಾ-1 ರವರು ನಿಪಿ-5 ರಂತೆ ಮರು ಹೇಳಿಕೆ, ಚಾಸಾ-2 ರವರು ನಿಪಿ-6 ರಂತೆ , ಚಾಸಾ-3 ರವರು ನಿಪಿ-7 ರಂತೆ, ಚಾಸಾ-5 ರವರು ನಿಪಿ-8 ರಂತೆ, ಚಾಸಾ-6 ರವರು ನಿಪಿ-9 ರಂತೆ, ಚಾಸಾ-4 ರವರು ನಿಪಿ-10 ರಂತೆ, ಚಾಸಾ-9 ರವರು ನಿಪಿ-13 ರಂತೆ, ಚಾಸಾ-10 ರವರು ನಿಪಿ-14 ರಂತೆ ಹೇಳಿಕೆಗಳನ್ನು ನೀಡಿರುವುದಾಗಿ ಮತ್ತು ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-32 ನೀವು ಹೆಚ್ಚಿಗೆ ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ-33 ನೀವು ನಿಮ್ಮ ಸಾಕ್ಷಿ ವಿಚಾರಣೆ ಮಾಡುತ್ತೀರಾ?

ಉತ್ತರಃ

(ಆರೋಪಿತನ ಹೇಳಿಕೆಯನ್ನು ನಾನು ಸ್ವತಃ ಹೇಳಿ ಬರೆದುಕೊಂಡಿದ್ದು ಅದು ಸತ್ಯವಾಗಿಯೂ ಹಾಗೂ ಪೂರ್ಣವಾಗಿಯೂ ಇದೆ ಎಂದೂ ಪ್ರಮಾಣೀಕರಿಸುತ್ತೇನೆ)

**(ಶ್ರೀ.ಶ್ರೀಧರ್ ಗೋಪಾಲಕೃಷ್ಣ ಭಟ್)**

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ದಿನಾಂಕಃ 17-06-2026 ದ.ಕ., ಮಂಗಳೂರು.